ಇ) ಇಲ್ಲ.

ಈ) ಪ್ರತಿ ಸಲವೂ ಪರಿಶೀಲಿಸಲಾಗುವುದು.

ತುಂಗ ಭದ್ರಾ ಕಾರ್ಖಾನೆಯವರು ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆ ಬಾಕಿ ಮನ್ನ.

935(107) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1988 ರಿಂದ ಶಿವಮೊಗ್ಗದ ತುಂಗಭದ್ರ ಸಕ್ಕರೆ ಕಾರ್ಖಾನೆಯವರಿಂದ ಈ ವರೆಗೆ ಬರಬೇಕಾದ ಖರೀದಿ ತೆರಿಗೆ ಬಾಕಿ ಮೊತ್ತವೆಷ್ಟು?

ಆ) ಈ ಖರೀದಿ ತೆರಿಗೆ ಬಾಕಿ ಬಗ್ಗೆ ಹಣ ಪಾವತಿ ಮಾಡದ ಕಾರಣ ಬಡ್ಡಿ ಹಾಕಿದ್ದು ನಿಜವೆ ಹಾಗೂ ಆ ಮೊತ್ತವೆಷ್ಟು?

ಇ) ದಿನಾಂಕ 21-8-1991ರಂದು ಸರ್ಕಾರ ಒಂದು ಆಜ್ಞೆ ಹೊರಡಿಸಿ ಬಡ್ಡಿ ಮನ್ನಾ ಮಾಡಿ ಖರೀದಿ ತೆರಿಗೆ ಹಣ ಪಾವತಿ ಮಾಡಲು ಸುಲಭ ಕಂತುಗಳನ್ನು ಕೊಟ್ಟಿರುವುದು ನಿಜವೆ;

ಈ) ರಾಜ್ಯದಲ್ಲಿ ಬೇರೆ ಯಾವುದಾದರೂ ಸಕ್ಕರೆ ಕಾರ್ಖಾನೆಗಳಿಗೆ ಇದೇ ರೀತಿಯ ಪರಿಹಾರ ಒದಗಿರುವುದೇ? (ವಿವರ ಒದಗಿಸುವುದು);

ಶ್ರೀ ಎಂ. ವೀರಪ್ಪಮೊಯಿಲಿ(ಮುಖ್ಯಮಂತ್ರಿಗಳು):-

ಅ) ವಿವರ ಈ ಕೆಳಕಂಡಂತಿದೆ:

ವರ್ಷ	ಮೊತ್ತ
1988-89	ಇಲ್ಲ
1989-90	ಇಲ್ಲ
1990-91	ರೂ. 29,35,512.00
1991-92	ರೂ. 40,47,112.00

ಆ) ಹೌದು. 1990-91ರ ಸಾಲಿಗೆ ಕರ್ನಾಟಕ ಮಾರಾಟ ತೆರಿಗೆ ನಿಯಮ 13(2)ರ ಪ್ರಕಾರ ರೂ.1,61,022.00 ದಂಡ ವಿಧಿಸಲಾಗಿದೆ. ಈ ಪೈಕಿ ರೂ.7,820.00 ಜಮಾ ಆಗಿದ್ದು ಬಾಕಿ ಮೊತ್ತವಾದ ರೂ.1,53,202.00 ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿಯ ರಿಟ್ ಅರ್ಜಿ ಸಂಖ್ಯೆ 4578:93ರಲ್ಲಿ ತಡೆಯಾಜ್ಞೆಗೆ ಒಳಪಟ್ಟಿರುತ್ತದೆ.

ಇ) ಹೌದು

ಈ) ಇಲ್ಲ

ವೀರಾಜಪೇಟೆ ತಾಲೂಕು, ಹೆರ್ಮಾಡು ಗ್ರಾಮಸ್ಥರಿಗೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ